# ಆಹಾ ಸುದ್ದಿ!

★ ಸಸಿತೋಟ



ಹಿಂದೊಮ್ಮೆ ಪ್ರಳಯವಾಗಿತ್ತಂತೆ. ಆಗ ನೋವಾ ಹಡಗಿನಲ್ಲಿ ಎಲ್ಲಾ ಜೀವಿಗಳ ಒಂದೊಂದು ಜೋಡಿ ಕುಳಿತು ಪಾರಾಗಿ ಪುನಃ ಭೂಮಿಯಲ್ಲಿ ಜೀವ ಮೊಳೆಯುವಂತಾಯಿತು ಎನ್ನುತ್ತದೆ ಕಥೆ. ಈಗ ಚೀನಾದ ರೈತ ಲಿಯು ಈ ಕೋಶಗಳನ್ನು ನಿರ್ಮಿಸಿದ್ದಾನೆ. ಸುನಾಮಿ ಅಪ್ಪಳಿಸಿದರೆ ಇದರಲ್ಲಿ ಕುಳಿತು ಪಾರಾಗಲು. ಪ್ರಳಯವಾದರೆ ಬಳಕೆಯಾಗುತ್ತದೆ, ಆಗದಿದ್ದರೂ ದುಡ್ಡು ಬರುತ್ತದೆ ಸರ್ಕಾರಕ್ಕೋ, ಕಂಪೆನಿಗೋ ಇದರ ತಯಾರಿಕೆ ಪೇಟೆಂಟ್ ಮಾರಿದರೆ...!

ಬಿಹಾರದ ಸುಂದರ್‌ಬಾರಿ ಗ್ರಾಮದಲ್ಲಿ ಯುವತಿಯರು ಮೊಬೈಲ್ ಫೋನ್ ಬಳಸುವುದರ ಮೇಲೆ ನಿಷೇಧವನ್ನು ಅಲ್ಲಿಯ ಗ್ರಾಮ ಪಂಚಾಯ್ತಿ ವಿಧಿಸಿದೆಯಂತೆ. ಬಳಸುವುದು ಕಂಡರೆ ಮದುವೆಯಾದ ಯುವತಿಯರಿಗೆ 2000 ರೂಪಾಯಿ ಮತ್ತು ಹುಡುಗಿಯರಿಗೆ 10,000 ರೂಪಾಯಿ ದಂಡವಂತೆ. ಇದೇಕೆ ತಾರತಮ್ಯ? ಮೊಬೈಲ್ ಮೂಲಕ ಹುಡುಗರ ಸಖ್ಯ ಬೆಳೆಸಿದ ಯುವತಿಯರು ಅವರ ಜೊತೆ ಓಡಿಹೋಗುವ ಪ್ರಕರಣಗಳು ಆ ಹಳ್ಳಿಯಲ್ಲಿ ಜಾಸ್ತಿಯಾಗಿವೆಯಂತೆ.

ವಿಶ್ವದಲ್ಲೇ ಅತ್ಯಂತ ದುಬಾರಿ ಕಾಫಿ ಪುಡಿ 'ಬ್ಲ್ಯಾಕ್ ಐವರಿ' (ಕೆಜಿಗೆ 1,100 ಡಾಲರ್) ಥಾಯ್ಲೆಂಡ್‌ನಲ್ಲಿ ತಯಾರಾಗುತ್ತದೆ. ಕಾಫಿ ಬೀಜ ಸಾಮಾನ್ಯದ್ದೇ. ಆದರೆ ಸಂಸ್ಕರಣೆ ಮಾತ್ರ ದುಬಾರಿ. ಕಾಫಿ ಬೀಜಗಳನ್ನು ಆನೆಗಳಿಗೆ ತಿನ್ನಿಸಿ ಅವು ಜೀರ್ಣವಾಗದೆ ಆನೆ ಲದ್ದಿಯಲ್ಲಿ ಹೊರಬಂದಾಗ ಅವುಗಳನ್ನು ಹುರಿದು, ಕುಟ್ಟಿ ಆ ಪುಡಿಯಿಂದ ಕಾಫಿ ತಯಾರಿಸುವುದು ಕೂಡಾ ಅಷ್ಟು ದುಬಾರಿಯಲ್ಲ. ಆದರೆ ಇದಕ್ಕಾಗಿ ಆನೆಗಳನ್ನು ಸಾಕುವುದೆಂದರೆ ಸಾಮಾನ್ಯವೇ ಎಂದು ಈ ಕಾಫಿ ಹಿಂದಿರುವ ಕೆನಡಾ ಉದ್ಯಮಿ ಪ್ರಶ್ನಿಸುತ್ತಾನೆ.



ಕೆಲವರಿಗೆ 'ಮಾವನ ಮನೆ' ಎಂದರೆ ಭಾರಿ ಪ್ರೀತಿ. ಒರಿಸ್ಸಾದ ತಿಮೋತಿ ಮದುವೆ ವಿಷಯದಲ್ಲೂ ಆಗಿದ್ದು ಹೀಗೆಯೇ. ಯಾವುದೋ ಚಿಲ್ಲರೆ ಕೇಸ್‌ನಲ್ಲಿ ಜೈಲು ಸೇರಿದ್ದ ತಿಮೋತಿ ಬಿಡುಗಡೆಯಾದ ದಿನವೇ ಮದುವೆಗೆ ಹೊರಟಿದ್ದ. ಅದೂ ಚರ್ಚ್‌ನಲ್ಲಿ ನಡೆಯಲಿರುವ ತನ್ನ ಮದುವೆಗೆ. ಜೀಪ್‌ನಲ್ಲಿ ಗಂಟೆಗೆ ನೂರು ಮೈಲುಗಳಷ್ಟು ವೇಗದಲ್ಲಿ ಹೊರಟಿದ್ದವನನ್ನು ಪೊಲೀಸರೂ ಹಿಂಬಾಲಿಸಿದರು. ಕೊನೆಗೂ ಚರ್ಚ್‌ನ ಪಾರ್ಕಿಂಗ್ ಆವರಣದಲ್ಲಿ ಹಿಡಿದುಕೊಂಡರು. ಅದೂ ಸಂಬಂಧಿಕರ ಜೊತೆ ಜಗಳವಾಡುತ್ತಿದ್ದಾಗ. ತಿಮೋತಿ ಮತ್ತೆ 'ಮಾವನ ಮನೆ' ಸೇರಿದ ಪೊಲೀಸ್ ದಿಬ್ಬಣದೊಂದಿಗೆ, ಮದುವೆ ಮಾಡಿಕೊಳ್ಳದೆಯೇ.



ಈಗ ಎಲ್ಲೆಡೆ ಮರುಸಂಸ್ಕರಣೆಯ ಮಂತ್ರ. ಪ್ಲಾಸ್ಟಿಕ್ ಕರಗಿಸುವುದು, ಬಳಸಿದ ಕಾಗದವನ್ನೂ ಮರುಬಳಕೆಗೆ ಹಚ್ಚುವುದು... ಅದನ್ನೇಕೆ ಫ್ಯಾಷನ್ ಷೋದಲ್ಲಿ ಬಳಸಬಾರದು? ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ದೊಡ್ಡ ಗುಂಪೇ ಇದೆ. ಈ ರೀತಿ ಬಳಸಿ ಬಿಸಾಡಿದ ವಸ್ತುಗಳನ್ನು ಧರಿಸಿ ಫ್ಯಾಷನ್ ಷೋದಲ್ಲಿ ಬೆಕ್ಕಿನ ನಡಿಗೆಯ ಜೊತೆ ಕಾಣಿಸಿಕೊಳ್ಳುವುದು ಕೂಡಾ ಮಾರ್ಜಾಲದಂತೆ.



ಸುಂದರ ರೂಪದರ್ಶಿ ಎಂದರೆ ಹೀಗಿರಬೇಕು. ಉದ್ದನೆಯ ಕಾಲುಗಳು, ಅರಡಿ ಎತ್ತರ, ಎತ್ತರವಾದ ಕೆನ್ನೆ ಎಲುಬು... ಬ್ರೆಜಿಲ್‌ನಲ್ಲಿ ಇಂತಹ ಸುಂದರಿಯರು ಬಹು ಸಂಖ್ಯೆಯಲ್ಲಿದ್ದು ಅಂತರರಾಷ್ಟ್ರೀಯವಾಗಿ ಬಹು ಬೇಡಿಕೆಯಂತೆ ಅವರಿಗೆ. ಹಾಗಂತ ಪುರುಷರು ಅಸೂಯೆ ಪಟ್ಟುಕೊಳ್ಳಬೇಕಾಗಿಲ್ಲ. ಪುರುಷರೇ ಲಿಂಗ ಬದಲಾವಣೆ ಮಾಡಿಕೊಂಡು (ಟ್ರಾನ್ಸ್‌ಜೆಂಡರ್) ಈ ಮೋಹಕ ರೂಪದ ಜೊತೆ ಕಾಸನ್ನೂ ಕಮಾಯಿಸುತ್ತಿದ್ದಾರಂತೆ.